CC-O. In Public Domain. Digitized by eGangotri

ಸದ್ಗುರು ಸ್ತವನ

(ಗುರುಭಕ್ತಿ–ಗೀತೆಗಳು)

ಡಾ. ಶಿವ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಸದ್ಗುರು ಸ್ತವನ

(ಗುರುಭಕ್ತಿ – ಗೀತೆಗಳು)

ಡಾ. ಶಿವ

ಭಾರತೀಯ ತತ್ತ್ವಜ್ಞಾನ ಮಂದಿರ ಹುಬ್ಬಳ್ಳಿ
ಬ್ಯಾಡ್ಜಿ-ಜಿಲ್ಲೆ ೦೧೦

Sri Vidyabharathi Book Centre, Sringeri

CC-0. In Public Domain. Digitized by eGangotri

ಸದ್ಗುರು ಸ್ತವನ

ಗುರುಭಕ್ತಿ-ಗೀತೆಗಳು-ಕೊಡುಗೆ- ಶ್ರೀಮತಿ ಪ್ರೇಮಾವತಿ,
ಶ್ರೀ ಅನಂತಮೂರ್ತಿ,
ಸಾಹಿತ್ಯ ಭಂಡಾರ, ಹುಬ್ಬಳ್ಳಿ

ಸರ್ವಸ್ವತ್ತು : ಡಾ. ಶಿವ

ಬೆಲೆ : ೫ ರೂಪಾಯಿಗಳು

ಮುದ್ರಿಸಿದವರು :
ಸಿಟಿ ಪ್ರೆಸ್, ಹುಬ್ಬಳ್ಳಿ

ಪ್ರಕಾಶಕರು :
ಭಾರತೀಯ ತತ್ವಜ್ಞಾನ ಮಂದಿರ
ಹೋಮಿಯೋ ಹೌಸ್
ಬ್ರಾಡ್ವೇ ಹುಬ್ಬಳ್ಳಿ

1979

Sri Vidyabharathi Book Centre, Sringeri

ಮುದ್ರಿಸಿದವರು :
ಸಿಟಿ ಪ್ರೆಸ್, ಹುಬ್ಬಳ್ಳಿ

ಪ್ರಕಾಶಕರು :
ಭಾರತೀಯ ತತ್ವಜ್ಞಾನ ಮಂದಿರ
ಹೋಮಿಯೋ ಹೌಸ್
ಬ್ರಾಡ್ವೇ ಹುಬ್ಬಳ್ಳಿ

1979

Sri Vidyabharathi Book Centre, Sringeri

ಮುನ್ನುಡಿ 'ಉಪನಿಷತ್' : ಡಾ. ಶಿವ

1 ಬಣ್ಣವು ನಿವೃತಿ ಮಾರ್ಗ ಹಾಗೂ ಸೂರ್ಯ ಜ್ಞಾನವನ್ನೂ
2 ಬೋಧಿವೃಕ್ಷ, ಸದ್ಗುರು ಪಾದ, ಸಾಮೀಪ್ಯವನ್ನೂ
3 ಕರಗಳ ಜೋಡಿ "ಗುರು ಸಾಕ್ಷಾತ್ ಪರಬ್ರಹ್ಮ"ಗೆ ನಮಿಸುತ್ತವೆ.

CC-O. In Public Domain. Digitized by eGangotri



ವೆ|| ಬ್ರ. ಶ್ರೀ ಶಂಕರಭಟ್ಟ ಅಗ್ನಿಹೋತ್ರಿ

ಡಾ. ಶಿವ, ಶ್ರೀ ವಿದ್ಯಾಭಾರತಿ ಪುಸ್ತಕ ಕೇಂದ್ರ ಶೃಂಗೇರಿ; ಹುಬ್ಬಳ್ಳಿ
Sri Vidyabharathi Book Centre, Sringeri

CC-O. In Public Domain. Digitized by eGangotri

ಪದಕ್ರಮ

ಅರಿತವರಿಲ್ಲ ೧. ಅರಿತವರೆಲ್ಲ ೨. ಇರುವು ೩. ಗುರುಪಾದ ೪
ಗುರುಸೇವೆ ೫. ಮಾಡಬೇಕಣ್ಣ ೬. ನಾವSS ೭.
ಧ್ಯಾನವ ಮಾಡುವೆ ೮. ನಿನ್ನಧ್ಯಾನ ೯. ಮುಕ್ಕು ಹಾಕಪ್ಪ ೧೦.
ನಾನೆಂತು ಮಾಡಲಿ ೧೨. ಪಾದ ಹಿಡಿಯೋಣು ೧೨. ಗುರುಚರಣ ೧೪.
ಪಾದಕ್ಕೆ ಬಿದ್ದೆನಯ್ಯ ೧೫. ಅತಿ ಸುಲಭ ೧೬. ನನ್ನ ಜೀವದಲ್ಲಿ ೧೭,
ಎಂತು ಬಣ್ಣಿಸ ಬಲ್ಲೆ ೧೮, ಸದ್ಗುರುನಾಥನ ೧೯. ಗುರುಪ್ರಸಾದ ೨೦,
ಗುರುಕೃಪೆ ೨೧. ಸದ್ಗುರು ಸಂಗ ೨೨. ಶರಣು ಸದ್ಗುರು ೨೩.
ನೀಡಿನೋಡು ೨೪. ಪರಬ್ರಹ್ಮ ೨೫. ನೀ ಬಂದೆ ೨೬.
ಸವಿ ನೋಡೆ ೨೮. ಆ ಗಣಿತ ಗುಣ ೩೦. ಜ್ಞಾನಿಯು ಇಹನೇ ೩೨,
ಗುರು ಮಹಾತ್ಮೆ [illegible]

Sri Vidyabharathi Book Centre, Sringeri

CC-0. In Public Domain. Digitized by eGangotri

ಗುರುವಿನ ಮಹಿಮೆಯ ಅರಿತವರಿಲ್ಲ
ಗುರುವು ಗುರುವೆಂಬುದು ಗೊತ್ತೇ ಇಲ್ಲ
ಗುರುವಿನ ಸಂಗತಿ ಇವರಿಗೆ ಇಲ್ಲ
ಗುರುವಿನ ಸುಖವನು ಪಡೆಯಲೇ ಇಲ್ಲ ॥೧॥

ಗುರುವೇ ಜಗಕೆ ಬರಬೇಕಲ್ಲ
ಗುರುವೇ ಜಗದಲಿ ಇರಬೇಕಲ್ಲ
ಗುರುವೇ ಜಗದ ನಾಶವು ಎಲ್ಲ
ಗುರುವೇ ಜಗಕೆ ಗುರುವಾಗಬಲ್ಲ ॥೨॥

ಗುರುವಿನ ಪಾದಕೆ ಬೀಳಲೇ ಇಲ್ಲ
ಗುರುವಿನ ಸಂಗ ಸೇರಲೇ ಇಲ್ಲ
ಗುರುವಿನ ಪ್ರಸಾದ ಪಡೆಯಲೇ ಇಲ್ಲ
ಗುರುವಿನ ಬಾಳನು ಬಾಳಲೇ ಇಲ್ಲ ॥೩॥

ಗುರುವಿನ ಹುಚ್ಚು ಹಿಡಿಯಲೇ ಇಲ್ಲ
ಗುರುವಿನ ಕಿಚ್ಚು ಸುಡಲೇ ಇಲ್ಲ
ಗುರುವಿನ ಆಚ್ಚು ಮೂಡಲೇ ಇಲ್ಲ
ಗುರುವಿನ ನೆಚ್ಚು ನೆಡಲೇ ಇಲ್ಲ ॥೪॥

ಗುರು-ಗುರು ಎಂದು ಕರೆಯಲೇ ಇಲ್ಲ
ಗುರು-ಗುರು ಎಂದು ಕೊರಗಲೇ ಇಲ್ಲ
ಗುರು-ಗುರು ಎಂದು ಸೊರಗಲೇ ಇಲ್ಲ
ಗುರು-ಗುರು ಎಂದು ಸಾಯಲೇ ಇಲ್ಲ ॥೫॥

ಗುರುವೇ ಮುಕ್ತಿಯ ಭಾಗ್ಯವಿಧಾತಾ
ಗುರುವೇ ಶಾಂತಿಯ ಸಾಗರನಾತಾ
ಗುರುವೇ ಮೋಕ್ಷವನೀಯುವದಾತಾ
ಗುರುವೇ ಪರಬ್ರಹ್ಮ ಗುರುವಾದಾತಾ ॥೬॥ ★

Sri Vidyabharathi Book Centre, Sringeri

CC-0. In Public Domain. Digitized by eGangotri

ಗುರುವಿನ ಮಹಿಮೆಯ ಅರಿತವರೆಲ್ಲ
ಗುರುವೇ ಗುರುವೆಂದು ಅರಿತರಲ್ಲ
ಗುರುವಿನ ಸಂಗತಿ ಇವರಿಗೆ ಎಲ್ಲ
ಗುರುವಿನ ಸುಖವನು ಪಡೆದರು ಅಲ್ಲ ॥೧॥

ಗುರುವಿನ ಪಾದಕೆ ಬಿದ್ದವರೆಲ್ಲ
ಗುರುವಿನ ಸಂಗ ಸೇರಿದರಲ್ಲ
ಗುರುವಿನ ಪ್ರಸಾದ ಪಡೆದವರೆಲ್ಲ
ಗುರುವಿನ ಬಾಳನು ಬಾಳಿದರಲ್ಲ ॥೨॥

ಗುರುವಿನ ಹುಚ್ಚು ಹಿಡಿದವರೆಲ್ಲ
ಗುರುವಿನ ಕಿಚ್ಚಲಿ ಸುಟ್ಟರು ಅಲ್ಲ
ಗುರುವಿನ ಅಚ್ಚು ಮೂಡಲು ಎಲ್ಲ
ಗುರುವಿನ ನೆಚ್ಚಿಗೆ ನೆಟ್ಟಿತು ಅಲ್ಲ ॥೩॥

ಗುರು–ಗುರು ಎಂದು ಕರೆದವರೆಲ್ಲ
ಗುರು–ಗುರು ಎಂದು ಕೊರಗಿದರಲ್ಲ
ಗುರು–ಗುರು ಎಂದು ಸೊರಗಿದರೆಲ್ಲ
ಗುರು–ಗುರು ಎಂದು ಮೆರೆದರು ಅಲ್ಲ ॥೪॥

ಗುರುವೇ ಜಗಕೆ ಬಂದನು ಅಲ್ಲ
ಗುರುವೇ ಜಗದಲಿ ಇರುವದು ಎಲ್ಲ
ಗುರುವೇ ಜಗದ ನಾಶವ ಬಲ್ಲ
ಗುರುವೇ ಜಗಕೆ ಗುರುವಾದನಲ್ಲ ॥೫॥

ಗುರುವು ಮುಕ್ತಿಯ ಕೊಟ್ಟನು ಅಲ್ಲ
ಗುರುವು ಶಾಂತಿಯ ತುಂಬಿದನಲ್ಲ
ಗುರುವು ಮೋಕ್ಷವ ನೀಡಿದನಲ್ಲ
ಗುರುವೇ ಪರಬ್ರಹ್ಮ ಗುರುಮಾಡಿದನಲ್ಲ. ॥೬॥ ★

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುವಿನ ಇರುವು

ಗುರುವಿನ ಇರುವನು ಬಲ್ಲವರಾರು
ಅರಿವಿನ ಎರಕದ ಮೂರ್ತಿಯ ಕಾಣು ॥ ಪ ॥

ನೀರೊಳಿದ್ದರೂ ನೆನೆಯನು ನೋಡು
ವಸುಧೆಯೊಳಿದ್ದರೂ ಅಂಟನು ನೋಡು
ಜ್ವಾಲೆಯ ಕಿಡಿಯು ಹತ್ತದು ನೋಡು
ಗಾಳಿಯ ರಭಸಕೆ ಹಾರನು ನೋಡು ॥೧॥

ಸಂಸಾರ ಸಾರ ಅರಿತವ ನೋಡು
ಕಮಲದ ಇರುವನು ಹೋಲುವ ನೋಡು
ನೀರಲಿ ಎಣ್ಣೆಯು ತರವಲ್ಲವೇನು
ಗುಡ್ಡದ ತೆರದಲಿ ಅಡ್ಡನು ತಾನು ॥೨॥

ಎಲ್ಲಕೂ ಸ್ಥಾನವ ಕೊಟ್ಟವ ನೋಡು
ಭೂತದ ಬಂಧುವು ಇವನೇ ನೋಡು
ಬಂಧನ ಬಿಡಿಸುವ ಭಾಂಧವ ನೋಡು
ಕರುಣೆಯ ಸಾಗರ ಸಾಕಾರ ನೋಡು ॥೩॥ ★

 Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಡಿಯೋ ನೀ ಗುರುಪಾದಾ

ಹಿಡಿಯೋ ನೀ ಗುರುಪಾದಾ ॥ಪ॥
ಶ್ರೀಗುರು ಪಾದಾ । ಸದ್ಗುರುಪಾದಾ ॥ಅ ಪ॥

ಮೂಲೋಕ ಬೆಳಗಿದ ಪಾವನಪಾದಾ
ಮುಕ್ತಿಯ ಮಾರ್ಗದ ಗುರುತರಪಾದಾ
ಹಿಡಿಯೋ ನೀ ಗುರುಪಾದಾ ॥೧॥

ಭಕ್ತರ ಹರಿಸುವ ಭರವಸೆ ಪಾದಾ
ಪತಿತರ ಎತ್ತುವ ಪಾವನ ಪಾದಾ
ಹಿಡಿಯೋ ನೀ ಗುರು ಪಾದಾ ॥೨॥

ಪರಸುರ ಪೂಜಿಪ ಪುಣ್ಯದ ಪಾದಾ
ಮೋಕ್ಷ ಪ್ರದಾಯಕ ಪರಮಪಾದಾ
ಹಿಡಿಯೋ ನೀ ಗುರುಪಾದಾ ॥೩॥ ★

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರು ಸೇವೆ

ಮಾಡಮ್ಮ ಗುರು ಸೇವೆಯಾ
ಸದ್ಗುರು ತನು ಸೇವೆಯಾ ॥ಪ॥

ಪತಿ-ಸುತರು ನನಗೆ ಯಾರಿಲ್ಲೆಂದು
ಬಂಧು ಬಳಗ ವಲ್ಲ ನೀನೇ ನೀಯೆಂದು
ಅನಾಥರ ನಾಥ ನನ್ನಿವನೆಂದು
ಮಾಡಮ್ಮ ಗುರು ಸೇವೆಯಾ ॥೧॥

ಸಂಸಾರ ಕಷ್ಟವು ಸಾಕು ಸಾಕೆಂದು
ಪರಮಾರ್ಥ ಗತಿಯು ಮುಂದೆ ನನಗೆಂದು
ಮುಕ್ತಿಯ ಫಲವ ನಾ ಪಡೆಯಬೇಕೆಂದು
ಮಾಡಮ್ಮ ಗುರು ಸೇವೆಯಾ ॥೨॥

ಪರದೈವ ಪರಮಾತ್ಮ ಇವನೆಂದು
ಸದ್ಗುರು ಮೂಲೋಕ ವಂದ್ಯನೆಂದು
ಪತಿತರ ಪಾವನ ಕಲ್ಪತರುವೆಂದು
ಮಾಡಮ್ಮ ಗುರುಸೇವೆಯಾ ॥೩॥ ★

Sri Vidyabharathi Book Centre, Sringeri

CC-0. In Public Domain. Digitized by eGangotri

ಮಾಡಬೇಕಣ್ಣ ಸದ್ಗುರು ಸೇವೆ ಮಾಡಬೇಕಣ್ಣಾ ॥ ಪ ॥

ಬ್ರಹ್ಮ–ವಿಷ್ಣು–ಮಹೇಶ್ವರಗೂ ಗುರುನೋಡಣ್ಣಾ ॥ಅಪ॥

ಜ್ಞಾನ- ಮುಕ್ತಿಯ ಬಯಸಿದರಣ್ಣಾ
ಸದ್ಗುರು ಪಾದವ ಹಿಡಿಯಬೇಕಣ್ಣಾ ॥೧॥

ಸದ್ಗುರುವಿನಲಿ ಶ್ರದ್ಧೆಯು ಬೇಕಣ್ಣಾ
ಸತ್ ಶಾಸ್ತ್ರದಿ ಸಂಶಯ ಬೇಡಣ್ಣಾ ॥೨॥

ಸದ್ಗುರುವಿನಲಿ ನಿಷ್ಠೆಯು ಬೇಕಣ್ಣಾ
ತತ್ತ್ವಜ್ಞಾನವು ದೊರವುದು ನೋಡಣ್ಣಾ ॥೩॥

ಸೃಷ್ಟಿಸ್ಥಿತಿ ಲಯವು ಇಲ್ಲಣ್ಣಾ
ಸಚ್ಚಿದಾನಂದ ಪಡೆಯಬೇಕಣ್ಣಾ ॥೪॥ ★

CC-0. In Public Domain. Digitized by eGangotri

ನಾವss ದಾಟಿಸೋದು ನಮ್ಮನ್ನ

ನಾವss ದಾಟಿಸೋದು ನಮ್ಮನ್ನss ॥ಪ॥
ಸದ್ಗುರು ನಾವss ದಾಟಿಸೋದು ನಮ್ಮನ್ನss ॥ಅ.ಪ.॥

ಮೂರು ಲೋಕದಾ ದಂಡೆಯು
ಆಶಾ ಪಾಶೆಯು ಮೊಸಳೆಯು
ನೆಲ ಕಾಣದ ಜಲವನು
ನಾವss ದಾಟಿಸೋದು ನಮ್ಮನ್ನss ॥೧॥

ತಾಪಯತ್ರಯದಾ ತಾಪಗಳು
ಕಾಮಕ್ರೋಧದಾ ತೆರೆಗಳು
ವಾಸನಾ–ಪಾಚಿ ಬಂಧಗಳು
ನಾವss ದಾಟಿಸೋದು ನಮ್ಮನ್ನss ॥೨॥

ಅಂಧ ಜ್ಞಾನ ಸುತ್ತಲೂ
ಆರು ಪಾರು ಕತ್ತಲೂ
ಗುರಿ ದಾರಿ ಹೊಳೆಯದು
ನಾವss ದಾಟಿಸೋದು ನಮ್ಮನ್ನss ॥೩॥

ಭವಸಾಗರಾ ಭಯವು
ಪುಸಿ ಸುಳ್ಳಿನಾ ಸಂಸಾರವು
ನಿಷ್ಠೆಯ ಇಟ್ಟರೆ ತಾಣವು
ನಾವss ದಾಟಿಸೋದು ನಮ್ಮನ್ನss ॥೪॥ ★

ಧ್ಯಾನವ ಮಾಡುವೆ

CC-0. In Public Domain. Digitized by eGangotri

ಧ್ಯಾನವ ಮಾಡುವೆ ಸದಾ ನಿನ್ನದೇ
ಕೀರ್ತನೆ ಹಾಡುವೆ ನಾಮಾ ನಿನ್ನದೇ ॥ಪ॥

ಗುರುವಿನ ಗುರೋ ಜಗದ್ಗುರೋ
ಭವಸಾಗರವ ಮಾಡೆಲೋ ಪಾರೋ ॥ಅ. ಪ.॥

ನಿನ್ನಯ ಚರಣವ ಕರದಲಿ ಪಿಡಿಯುವೆ
ನಿನ್ನಯ ರೂಪವ ಕಣ್ಣಲಿ ಕಾಣುವೆ
ನಿನ್ನಯ ವಾಣಿಯ ಕಿವಿಯಲಿ ಕೇಳುವೆ
ನಿನ್ನಯ ಸೇವೆಯ ನಿತ್ಯವೂ ಮಾಡುವೆ ॥೧॥

ನಿನ್ನಯ ತೃಷೆಗೆ ಪ್ರೀತಿಯ ಕುಡಿಸುವೆ
ನಿನ್ನಯ ಹಸಿವಿಗೆ ಭಕ್ತಿಯ ಉಣಿಸುವೆ
ನಿನ್ನಯ ತನುವಿಗೆ ಸ್ನೇಹವ ಎರಿಯುವೆ
ನಿನ್ನಯ ನಿದ್ದೆಗೆ ಮಮತೆಯ ಹಾಡುವೆ ॥೨॥

ನಿನ್ನಯ ಸಂಗಡ ಕಾಲವ ಕಳೆಯುವೆ
ನಿನ್ನಯ ಶ್ರವಣದಿ ವೇಳೆಯ ನೂಕುವೆ
ನಿನ್ನಯ ಮನನದಿ ಜೀವನ ನಡೆಸುವೆ
ನಿನ್ನಯ ಧ್ಯಾನದಿ ಜನ್ಮವ ನೀಗುವೆ ॥೩॥ ★

Sri Vidyabharathi Book Centre, Sringeri

CC-0. In Public Domain. Digitized by eGangotri

ಗುರು ನಿನ್ನ ಧ್ಯಾನ

ಗುರು ನಿನ್ನ ಧ್ಯಾನಾ ಮೋಕ್ಷವಿಧಾನಾ ॥ ಪ ॥
ತನುವಿನ ಸೇವನಾ ನಿತ್ಯದ ಸಾಧನಾ ॥ ಅ ಪ ॥

ನಿನ್ನಯ ಜೀವನಾ ಆದರ್ಶ ಪಾವನಾ
ಮುಕ್ತಿಯ ಮಾರ್ಗಕೆ, ಬೆಳಕಿನ ದರ್ಶನಾ ॥
ಗುರು ನಿನ್ನ ಧ್ಯಾನಾ..... ॥೧॥

ನಿನ್ನಯ ದೃಷ್ಟಿಯು ಅಮೃತ ಸಿಂಚನಾ
ಪಾವನ ಗಂಗೆಯ ಪುಣ್ಯ ಅಭ್ಯಂಜನಾ ॥
ಗುರು ನಿನ್ನ ಧ್ಯಾನಾ..... ॥೨॥

ನಿನ್ನಯ ನುಡಿಯು ಮೃಷ್ಟಾನ್ನ ಭೋಜನಾ
ಅನುಭವಾಮೃತದ ಮಹಾ ವಾಕ್ಯವಚನಾ
ಗುರು ನಿನ್ನ ಧ್ಯಾನಾ..... ॥೩॥

ನಿನ್ನಯ ಸ್ಪರ್ಶವು ಮಿಂಚಿನ ಚೇತನಾ
ಆನಂದ ಸ್ಫೂರ್ತಿಯ ಆತ್ಮಸುಯೋಜನಾ
ಗುರು ನಿನ್ನ ಧ್ಯಾನಾ..... ॥೪॥

★

CC-0. In Public Domain. Digitized by eGangotri

ಮುಕ್ಕು ಹಾಕವ್ವ ತಂಗಿ । ಮುಕ್ಕು ಹಾಕವ್ವ ।
ಸದ್ಗುರುನಾಥನ ನೆನೆಯುತ ನೀನು ಮುಕ್ಕು ಹಾಕವ್ವ ॥ಪ॥

ದೇಹವೆಂಬುವ ಬೀಸುಕಲ್ಲಿಗೆ
ಆಹಾರವೆಂಬುವ ಮುಕ್ಕನು ಹಾಕಿ
ತ್ರಾಣವೆಂಬುವ ಹಿಟ್ಟನು ತೆಗೆದು
ಮುಕ್ತಿ ಎಂಬುವ ರೊಟ್ಟಿಮಾಡಲು
ಮುಕ್ಕು ಹಾಕವ್ವ ತಂಗೀ ಮುಕ್ಕು ಹಾಕವ್ವ ॥೧॥

ಮನಸ್ಸೆಂಬುವ ಬೀಸುಕಲ್ಲಿಗೆ
ಸತ್ಸಂಗವೆಂಬುವ ಮುಕ್ಕನು ಹಾಕಿ
ತತ್ತ್ವವೆಂಬುವ ಹಿಟ್ಟನು ತೆಗೆದು
ಮುಕ್ತಿ ಎಂಬುವ ರೊಟ್ಟಿಮಾಡಲು
ಮುಕ್ಕು ಹಾಕವ್ವ ತಂಗೀ ಮುಕ್ಕು ಹಾಕವ್ವ ॥೨॥

ಬುದ್ಧಿ ಎಂಬುವ ಬೀಸುಕಲ್ಲಿಗೆ
ಜ್ಞಾನವೆಂಬುವ ಮುಕ್ಕನು ಹಾಕಿ
ಅನುಭವವೆಂಬುವ ಹಿಟ್ಟನು ತೆಗೆದು
ಮುಕ್ತಿ ಎಂಬುವ ರೊಟ್ಟಿ ಮಾಡಲು
ಮುಕ್ಕು ಹಾಕವ್ವ ತಂಗೀ ಮುಕ್ಕು ಹಾಕವ್ವ ॥೩॥

ಅಹಂಕಾರದ ಬೀಸುಕಲ್ಲಿಗೆ
ಆತ್ಮವೆಂಬುವ ಮುಕ್ಕನು ಹಾಕಿ
ಪರಮಾತ್ಮವೆಂಬುವ ಹಿಟ್ಟನು ತೆಗೆದು
ಮುಕ್ತಿ ಎಂಬುವ ರೊಟ್ಟಿಮಾಡಲು
ಮುಕ್ಕು ಹಾಕವ್ವ ತಂಗೀ ಮುಕ್ಕು ಹಾಕವ್ವ ॥೪॥ ★

CC-O. In Public Domain. Digitized by eGangotri

ಚಿತ್ತವೆಂಬುವ ಬೀಸುಕಲ್ಲಿಗೆ
ಧ್ಯಾನವೆಂಬುವ ಮುಕ್ಕನು ಹಾಕಿ
ಸಮಾಧಿ ಎಂಬುವ ಹಿಟ್ಟನು ತೆಗೆದು
ಮುಕ್ತಿ ಎಂಬುವ ರೊಟ್ಟಿಮಾಡಲು
ಮುಕ್ಕು ಹಾಕವ್ವ ತಂಗೀ ಮುಕ್ಕು ಹಾಕವ್ವ ॥೫॥

ಸತ್ಯವೆಂಬುವ ಬೀಸುಕಲ್ಲಿಗೆ
ಚಿತ್ ವೆಂಬುವ ಮುಕ್ಕನು ಹಾಕಿ
ಆನಂದವೆಂಬುವ ಹಿಟ್ಟನು ತೆಗೆದು
ಮುಕ್ತಿ ಎಂಬುವ ರೊಟ್ಟಿ ಮಾಡಲು
ಮುಕ್ಕು ಹಾಕವ್ವ ತಂಗೀ ಮುಕ್ಕು ಹಾಕವ್ವ ॥೬॥ ★

ನಾನೆಂತು ಮಾಡಲಿ. ಪಾಹಿಮಾಂ. CC-0. In Public Domain. Digitized by eGangotri

ನಾನೆಂತು ಮಾಡಲಿ ಸದ್ಗುರು ಸೇವೆಯ
ಉಳ್ಳವs ಬಲ್ಲವs ಬಲವಂತ ನಾನಲ್ಲ ॥

ರಕ್ತದಿ ಪಾದದ ಪೂಜೆಯ ಗೈಯುವೆ
ಪ್ರೀತಿಯ ಪಾನಕ ಪ್ರೇಮದಿ ಕುಡಿಸುವೆ
ಭಕ್ತಿಯ ಅನ್ನವ ತುತ್ತಲಿ ಉಣಿಸುವೆ
ಚರ್ಮದ ಚಪ್ಪಲಿ ಚರಣಕೆ ತೊಡಿಸುವೆ
ನಾನೆಂತು ಮಾಡಲಿ..... ॥೧॥

ಮೂಳೆಯ ಕಂಬದಿ ಹಂದರ ಹಾಕುವೆ
ಕಾಲಿನ ಗೂಟದಿ ಮಂಚವ ಮಾಡುವೆ
ಮಾಂಸದ ಗಾದಿಯ ಹಾಸಿಗೆ ಹಾಸುವೆ
ಕರಗಳ ಜೋಡನು ಸೇವೆಗೆ ಇಡುವೆ
ನಾನೆಂತು ಮಾಡಲಿ..... ॥೨॥

ಕಣ್ಣಿನ ಜ್ಯೋತಿಯ ಪಣತಿಯ ಹಚ್ಚುವೆ
ಕಿವಿಗಳ ಪಂಖದಿ ಗಾಳಿಯ ಬೀಸುವೆ
ನಾಲಿಗೆ ವೀಣೆಲಿ ರಾಗವ ಹಾಡುವೆ
ಪ್ರಾಣದ ಉಸಿರನು ಕಾಯಲು ಹಚ್ಚುವೆ
ನಾನೆಂತು ಮಾಡಲಿ..... ॥೩॥

ಮನಸಿನ ಜಾಳಿಗೆ ಪರದೆಯ ಬಿಚ್ಚುವೆ
ಚಿತ್ತದ ಬತ್ತಿಯ ಹೊತ್ತಿಸಿ ಇಡುವೆ
ಬುದ್ಧಿಯ ನಿದ್ದೆಯ ದೃಷ್ಟಿಯ ತೆಗೆಯುವೆ
'ಅಹಂ'ಮದ ಬಾಗಿಲು ಭದ್ರವ ಪಡಿಸುವೆ
ನಾನೆಂತು ಮಾಡಲಿ..... ॥೪॥

★

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾದ ಹಿಡಿಯೋಣು ಬಾರೆ

ಪಾಪ ಹಿಡಿಯೋಣು ಬಾರೆ, ಗುರುವಿನ
ಪಾದ ಹಿಡಿಯೋಣು ಬಾರೆ ॥ ಪ ॥

ಬ್ರಹ್ಮನು ಹಿಡಿದಿಹ ಸದ್ಗುರುಪಾದ
ವಿಷ್ಣು ಧರಿಸಿದ ಸದ್ಗುರು ಪಾದ
ಮಹೇಶ್ವರ ಹೊತ್ತಿಹ ಸದ್ಗುರು ಪಾದ
ಬ್ರಹ್ಮಾಂಡ ಬೆಳಗುವ ಸದ್ಗುರು ಪಾದ
ಪಾದ ಹಿಡಿಯೋಣು ಬಾರೆ..... ॥೧॥

ಆತ್ಮ ವಿದ್ಯೆಯ ಬೋಧೆಯ ಪಾದ
ತತ್ತ್ವಜ್ಞಾನವ ಕರುಣಿಪ ಪಾದ
ಮುಕ್ತಿಯ ಮಾರ್ಗದ ದರ್ಶನ ಪಾದ
ಉಪನಿಷತ್ ಅರ್ಥವೇ ಸದ್ಗುರು ಪಾದ
ಪಾದ ಹಿಡಿಯೋಣು ಬಾರೆ..... ॥೨॥

ಕರುಣಾಪದವೇ ಸದ್ಗುರು ಪಾದ
ಅಮೃತ ಕಲಶ ಸದ್ಗುರು ಪಾದ
ಆನಂದ ಸಾಗರ ಸದ್ಗುರು ಪಾದ
ಸಚ್ಚಿದಾನಂದವೇ ಸದ್ಗುರು ಪಾದ
ಪಾದ ಹಿಡಿಯೋಣು ಬಾರೆ..... ॥೩॥

★

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರು ಚರಣ ಸೇವೆಯು
ನೀಡಿತು ಸುಖ ಶಾಂತಿಯು ॥

ಪಾದ್ಯದಿ ಪಾದದ ಪೂಜೆಯ ಗೈಯಲು
ಪಾದದ ಧೂಳಿಯು ಪಾವನಗೊಳಿಸಿತು ॥

ಅರ್ಘ್ಯದಿ ಹಸ್ತದ ಪೂಜೆಯ ಗೈಯಲು
ಆಶೀರ್ವಾದವು ಪಾವನಗೊಳಿಸಿತು ॥

ಆಚಮನದಿ ಪೂಜೆಯ ಗೈಯಲು
ಮುಖದ ಮಾತು ಪಾವನಗೊಳಿಸಿತು ॥

ಆಸನ ನೀಡುವ ಪೂಜೆಯ ಗೈಯಲು
ಆಶ್ರಮವೆಲ್ಲವೂ ಪಾವನಗೊಳಿಸಿತು ॥

ಫಲಾಹಾರದಿ ಪೂಜೆಯ ಗೈಯಲು
ಪಾಪಿಯ ಜೀವನ ಪಾವನವಾಯಿತು ॥

CC-O. In Public Domain. Digitized by eGangotri
Sri Vidyabharathi Book Centre, Sringeri

CC-0. In Public Domain. Digitized by eGangotri

ಬಿಡೆನು ನಿನ್ನ । ಚರಣ ಕಮಲವ ॥
ರಕ್ಷಿಸೆನ್ನನು । ಸದ್ಗುರುರಾಯೊ ॥ ಪ ॥

ಎಂಭತ್ನಾಲ್ಕು ಲಕ್ಷ ಯೋನಿ
ತಿರು ತಿರುಗಿ ಪಾದಕೆ ಬಿದ್ದೇನಯ್ಯಾ ॥ ಅ ಪ ॥

ಮಾನವ ಜನ್ಮಕೆ ಹುಟ್ಟುದ ಕಷ್ಟ
ಹುಟ್ಟಿದ ದೇಹಕೆ ಬೆಳೆಯುವ ಕಷ್ಟ
ಬೆಳೆದ ದೇಹಕೆ ಬದಲಾಗುವ ಕಷ್ಟ
ಬದಲಾದ ದೇಹಕೆ ರೋಗದ ಕಷ್ಟ
ರೋಗದ ದೇಹಕೆ ಮುಪ್ಪಿನ ಕಷ್ಟ
ಮುಪ್ಪಿನ ದೇಹಕೆ ಮರಣದ ಕಷ್ಟ

ಇಂದ್ರಿಯ ಸುಖವನು ತಡೆಯುವ ಕಷ್ಟ
ಮನಸಿನ ನಿಗ್ರಹ ಮಾಡಲು ಕಷ್ಟ
ಬುದ್ಧಿಗೆ ತಿದ್ದಿ ಹೇಳುವ ಕಷ್ಟ
ನಾನು-ನನ್ನದು ತೀರದ ಕಷ್ಟ

★

Sri Vidyabharati Book Centre, Sringeri

CC-O. In Public Domain. Digitized by eGangotri

ಸುಲಭದಲಿ ಅತೀ ಸುಲಭ, ಕಾಠಿಣ್ಯದಲ್ಲಿ ಅತೀ ಕಠಿಣ
ಕರುಣೆಯಲಿ ಅತೀ ಕರುಣೆ, ಕಠೋರಿಗೆ ಅತೀ ಕಠೋರ
ನಮ್ಮ ಈ ಗುರುನಾಥ !

ಶಾಂತಿಯಲಿ ಅತೀ ಶಾಂತ, ಕ್ರೋಧಿಗಳಿಗೆ ಅತೀ ಕ್ರೋಧಿ
ದಯೆಯಲಿ ದಯಾಸಿಂಧು, ನಿರ್ದಯಿಗೆ ಅತೀ ನಿರ್ದಯಿ
ನಮ್ಮ ಈ ಗುರುನಾಥ !

ವಿನಯದಲಿ ಅತೀ ವಿನಯಿ. ಗರ್ವಕ್ಕೆ ಅತೀ ಗರ್ವಿ
ಅಣುವಿಗೆ ಪರಮಾಣು, ಮಹತಿಗೆ ಗೌರೀಶಂಕರ
ನಮ್ಮ ಈ ಗುರುನಾಥ !

ಭಕ್ತರಿಗೆ ವರದಾಯಿ, ಕಲ್ಪತರು, ಕಾಮಧೇನು
ವಿಭಕ್ತರಿಗೆ ಕುಠಾರ, ಖಡ್ಗ, ಶೂಲಪಾಣಿ
ನಮ್ಮ ಈ ಗುರುನಾಥ !

ನಾಥರ ನಾಥ, ಅನಾಥರಿಗೂ ನಾಥ,
ಅತೀ ಸುಲಭ ನಮ್ಮ ಜಗನ್ನಾಥ
ನಮ್ಮ ಈ ಗುರುನಾಥ !

★

CC-0. In Public Domain. Digitized by eGangotri

ನನ್ನ ಜೀವನದಲ್ಲಿ ಏಕೆ ಬಂದಿಹೆ ಬಲ್ಲೆ
ಹಾಸು ಹೊಕ್ಕಿನ ಸೊಲ್ಲೆ ಹುಚ್ಚು ಹಿಡಿಸಿದನಲ್ಲೆ
ಶ್ರೀಗುರುವೆ ಸದ್ಗುರುವೆ ಜಗದ್ಗುರುವೆ ಬಲ್ಲೆ
ಬಂಧನವಬಿಡಿಸಿ ಮುಕ್ತ ಮಾಡಿದನಲ್ಲೆ ॥೧॥

ಅಹಲ್ಯಯಾ ಶಿಲೆಯನ್ನು ರಾಮು ಮೆಟ್ಟಿದಂತೆ
ಪ್ರಲ್ಹಾದನಲ್ಹಾದ ನಾರಸಿಂಹನಂತೆ
ಬಲಿಯ ಹೊಚ್ಚಲ ಶ್ರೀ ವಿಷ್ಣು ಕಾದಂತೆ
ದ್ರೌಪದಿಯ ಮಾನ ಕೃಷ್ಣ ರಕ್ಷಿಸಿದಂತೆ ॥೨॥

ಉಮೆಯ ಭಕ್ತಿಗೆ ಶಿವನು ಒಲಿದಂತೆ
ಅನಸೂಯ ಗರ್ಭದಿ ದತ್ತ ಜನಿಸಿದಂತೆ
ಪುಂಡರೀಕನ ಭಕ್ತಿ ಪಾಂಡುರಂಗನ ತಡೆದಂತೆ
ರಾವಣನು ಆತ್ಮಲಿಂಗವನು ಪಡೆದಂತೆ ॥೩॥

ಕರಿಯು ಕರೆಯಲು ಬಂದ ಆದಿಮೂಲನಂತೆ
ಗೋಪಿಯರ ಹೃದಯದಿ ಗೋಪಾಲ ಸಿಕ್ಕಂತೆ
ಯಶೋದಾನಂದಗೆ ವಾಸುದೇವನು ಅಂತೆ
ರಾಧೆಯಾ ಕೃಷ್ಣ ವಿಧಿಗೆ ಕುಣಿದಂತೆ ॥೪॥

ಮೀರಾದೇವಿಯ ಪ್ರಭು ಗಿರಿಧರನು ಅಂತೆ
ಕಬೀರನು ಕಂಡ ರಾಮದೇವರಂತೆ
ಸೂರದಾಸಗೆ ಸಿಕ್ಕ ಮುರಹರಿಯ ಮುದದಂತೆ
ಕನಕದಾಸನ ಕನಕ ಚನ್ನಕೇಶವನಂತೆ ॥೫॥

ಶಿವಾಜಿಯ ಸಿರಿಯು ರಾಮದಾಸನು ಅಂತೆ
ಶರೀಫನಾ ಗುರು ಗೋವಿಂದ ಅಂದಂತೆ
ನಾಮದೇವ ವಿಠ್ಠಲ ಕೂಡಿ ಆಡಿದಂತೆ
ನರಗೆ ನಾರಾಯಣ ಗೀತೆ ಬೋಧಿಸಿದಂತೆ ॥೬॥

Sri Vidyabharathi Book Centre, Sringeri

CC-0. In Public Domain. Digitized by eGangotri

ಎಂತು ಬಣ್ಣಿಸ ಬಲ್ಲೆ, ಸದ್ಗುರು ನಿನ್ನನು || ಪ ||
ಏಳು ಹೆಡೆಯ ನಾಗ ತೆಪ್ಪಗಾಗಿರುವನು ||ಅ ಪ||

ಬ್ರಹ್ಮದೇವನು ನೀನು, ವಿಷ್ಣು ದೇವರು ನೀನು
ಮಹೇಶ್ವರನು ನೀನು, ಪರಬ್ರಹ್ಮ ಪ್ರತ್ಯಕ್ಷ ಅಲ್ಲವೇನು ?
ಎಂತು ಬಣ್ಣಿಸ ಬಲ್ಲೆ..... ||೧||

ಮಿಥ್ಯ ಮಾಯೆಯ ಜಗವ, ನಿತ್ಯವಲ್ಲೆಂದು ನುಡಿದು
ಸತ್ಯ ಮಾರ್ಗವ ತೋರಿ, ತಥ್ಯ ಅನುಗ್ರಹಿಸಿದಿ ನೀನು
ಎಂತು ಬಣ್ಣಿಸ ಬಲ್ಲೆ..... ||೨||

ಪಂಚ ಭೂತಕ ದೇಹ, ಮಾಯೆ ಮಾಡಿದೆ ನೀನು
ಪ್ರಾಣ ಪಂಚಕ ಕೋಶ, ಗೈದೆ ನೀ ನಿತ್ರಾಣವನು
ಎಂತು ಬಣ್ಣಿಸ ಬಲ್ಲೆ.... ||೩||

ವಿಜ್ಞಾನಕೋಶದ ಆಚೆ, ಸುಜ್ಞಾನ ಮತಿ ಬೆಳಗಿ
ಆನಂದ ಕೋಶವ ತೋರಿ, ಪರಮಾನಂದವ ಉಣಿಸಿದಿ
ಎಂತು ಬಣ್ಣಿಸ ಬಲ್ಲೆ ||೪||

ಹಗಲಿ ನೆಚ್ಚರ ಅಳಿಸಿ, ಕನಸಿನಾಟವ ಮರಳಿ
ನಿದ್ದೆ ಮಬ್ಬನು ಹರಿಸಿ, ಪ್ರಜ್ಞಾನ ಘನ ಕರುಣಿಸಿದಿ
ಎಂತು ಬಣ್ಣಿಸ ಬಲ್ಲೆ..... ||೫||

ಬುದ್ಧಿ ಗರಿಮೆಯ ಹೀರಿ, ಮನಸಿನಾಳವ ಸೀಳಿ
ಅಹಂಕಾರವನೆತ್ತಿ ಕುಕ್ಕಿ, ಚಿತ್ತವನು ಸ್ಥಿರಗೊಳಿಸಿದಿ
ಎಂತು ಬಣ್ಣಿಸ ಬಲ್ಲೆ..... ||೬||

ಕಣ್ಣು ಮೂಗಿನ ಆಟ, ಬಣ್ಣ ಬಣ್ಣದ ನೋಟ
ಮೈಮಾಟ ಕೈಮಾಟ, ಎಲ್ಲವ ಮಟಾ ಮಾಯ ಮಾಡಿದಿ
ಎಂತು ಬಣ್ಣಿಸಬಲ್ಲೆ..... ||೭||

Sri Vidyabharathi Book Centre, Sringeri

CC-0. In Public Domain. Digitized by eGangotri

ಸದ್ಗುರುನಾಥನ ಮಾಡಿಕೊಂಡೆ
ಪರಮಾರ್ಥ ಸುಖವನು ಪಡಕೊಂಡೆ || ಪ ||

ಸದ್ಗುರುನಾಥನ ಮಾಡಿಕೊಂಡೆ
ಸಂಸಾರ ಬಂಧನ ಹರಕೊಂಡೆ
ಮುಕ್ತಿಯ ಫಲವನ್ನು ಪಡಕೊಂಡೆ
ಸಚ್ಚಿದಾನಂದದಿ ಉಳಕೊಂಡೆ ॥೧॥

ಸದ್ಗುರುನಾಥನ ಮಾಡಿಕೊಂಡೆ
ಸಾಧಕ ಬಂಧುಗಳ ಕೂಡಿಕೊಂಡೆ
ಸತ್ಸಂಗ ಲಾಭವ ಪಡಕೊಂಡೆ
'ತತ್ತ್ವಮಸಿ'ಯನು ತಿಳಕೊಂಡೆ ॥೨॥

ಸದ್ಗುರುನಾಥನ ಮಾಡಿಕೊಂಡೆ
ಶಾಸ್ತ್ರ ಶ್ರವಣವ ಕೇಳಿಕೊಂಡೆ
ಜೀವದ ಧ್ಯೇಯವ ತಿಳಕೊಂಡೆ
'ಅಹಂಬ್ರಹ್ಮ'ವ ಅರಿತುಕೊಂಡೆ ॥೩॥

ಸದ್ಗುರುನಾಥನ ಮಾಡಿಕೊಂಡೆ
ಅಜ್ಞಾನ ಕತ್ತಲೆ ಕಳಕೊಂಡೆ
ಜೀವನ ಸಾರ್ಥಕ ಮಾಡಿಕೊಂಡೆ
'ಪ್ರಜ್ಞಾನ ಬ್ರಹ್ಮದಿ ಉಳಕೊಂಡೆ ॥೪॥

ಸದ್ಗುರುನಾಥನ ಮಾಡಿಕೊಂಡೆ
ದೇಹದ ಅಭಿಮಾನ ಮಾರಿಕೊಂಡೆ
ಆತ್ಮನ ಇರವನು ನೋಡಿಕೊಂಡೆ
'ಅಯಮಾತ್ಮ ಬ್ರಹ್ಮ'ಎಂದುಕೊಂಡೆ ॥೫॥

Sri Vidyabharathi Book Centre, Sringeri

CC-0. In Public Domain. Digitized by eGangotri

ಧನ್ಯ ಮಾಡಿತೋ ಗುರು ಪ್ರಸಾದ
ಪಾಽಪಽನಾಯಿತೋ ಜೀವ–ಸಾಕ್ಷಾತ್ಕಾರ ॥ಪ॥

ಕಣ್ಣು ಕಂಡಿತೋ
ಕುರುಡು–ಕಣ್ಣು ಕಂಡಿತೋ, ಸದ್ಗುರು ರೂಪಾ
ದರ್ಶನಾಯಿತೋ ಅವ್ಯಕ್ತರೂಪ ॥೧॥

ಕಿವಿಯು ಕೇಳಿತೋ
ಕಿವುಡ–ಕಿವಿಯು ಕೇಳಿತೋ, ಸದ್ಗುರು ಉಕ್ತಿ
ತಿಳಿವು ಮೂಡಿತೋ ಅಚಿಂತ್ಯ ಶಕ್ತಿ ॥೨॥

ಬಾಯಿ ಹಾಡಿತೋ
ಮೂಕ–ಬಾಯಿ ಹಾಡಿತೋ, ಸದ್ಗುರು ಕೀರ್ತಿ
ಸಂತಸ ಪಡೆಯಿತೋ ಆನಂದ ಸ್ಫೂರ್ತಿ ॥೩॥

ಮೂಗು ಮೂಸಿತೋ
ಮಂಡ–ಮೂಗು ಮೂಸಿತೋ, ಸದ್ಗುರು ಇರುವು
ಅರಿವು ಮೂಡಿತೋ ಅನಂತ ಕುರುಹು ॥೪॥

ಕೈಯು ಮುಟ್ಟಿತೋ
ಚೊಂಚ–ಕೈಯು ಮುಟ್ಟಿತೋ, ಸದ್ಗುರು ತನವು
ಆನಂದ ಉಕ್ಕಿತೋ ಅಧ್ಯಾತ್ಮ ಚಿರವು ॥೫॥

ಮನವು ಹೊಂದಿತೋ
ಮೂಢ–ಮನವು ಹೊಂದಿತೋ, ಸದ್ಗುರು ಸಂಗ
ಧನ್ಯವೆನಿಸಿತೋ ಸಚ್ಚಿದಾನಂದವು. ॥೬॥

CC-0. In Public Domain. Digitized by eGangotri

ಗುರುನಾಥಾ–ಕೃಪೆ ಮಾಽಡಿದಾ
ಜೀವನ ಸಾರ್ಥಕಽ ಮಾಡಿದಾ ॥ಪ॥

ಜನ್ಮ ಜನ್ಮದಾ ಗೋಳನು ಕಳೆದಾ
ಪುನರ್ ಜನ್ಮದಾ ಹುಟ್ಟನು ಕಳೆದಾ
ಮೃತ್ಯು ಸಾವಿನಽ ಅಂಜಿಕೆ ಕಳೆದಾ
ಅಜ್ಞಾನ ಮಾಯೆಯ ಬಂಧನ ಕಳೆದಾ ॥೧॥

ಪಾಪ ಪುಣ್ಯದ ಪೀಡೆಯ ಕಳೆದಾ
ತೀರ್ಥಕ್ಷೇತ್ರದ ಶ್ರಮವನು ಕಳೆದಾ
ದಾನ–ಧರ್ಮದ ಡಂಭವ ಕಳೆದಾ
ಯಜ್ಞ ಯಾಗದ ಭಾರವ ಕಳೆದಾ ॥೨॥

ಗಂಡು–ಹೆಣ್ಣಿನಽ ಭಾನನು ಕಳೆದಾ
ಮೇಲು ಕೀಳಿಂಬ ಭಾವವ ಕಳೆದಾ
ಮಡದೀ ಮಕ್ಕಳಽ ಮೋಹವ ಕಳೆದಾ
ಹೊನ್ನು–ಮಣ್ಣಿನಽ ಮದವನು ಕಳೆದಾ ॥೩॥

ಬೇಕು–ಬೇಡೆಂಬ ಹಟವನು ಕಳೆದಾ
ಸಾಕು–ಸಾಕೆಂಬ ಬೇಸರ ಕಳೆದಾ
ಸಂಸಾರ ಸುಖದ ಭ್ರಮೆಯನು ಕಳೆದಾ
ವ್ಯರ್ಥ ಶ್ರಮದ ಕಷ್ಟವ ಕಳೆದಾ ॥೪॥

ಮನದ ಬಯಕೆಯ ಕಾಮವ ಕಳೆದಾ
ಮತ್ತೂ ಬೇಕೆಂಬ ಲೋಭವ ಕಳೆದಾ
ಅಹಂಭಾವದ ಕ್ರೋಧವ ಕಳೆದಾ
ಹೊಟ್ಟೆಯಕಿಚ್ಚಿನ ಮತ್ಸರ ಕಳೆದಾ ॥೫॥

 In Public Domain. Digitized by eGangotri

ಏನು ಭಾಗ್ಯ ಸದ್ಗುರು ಸಂಗss
ಎಂಥ ಭಾಗ್ಯ ಶ್ರೀಗುರು ಸಂಗss ॥ಪ॥

ಕತ್ತಲಿಂದ ಎತ್ತಿ ಹಿಡಿದ
ಬೆಳಕಿನತ್ತ ತೂರಿ ಒಗೆದ
ಮತ್ತೆ ಮತ್ತೆ ಕೈಯ ಹಿಡಿದಾ
ಕೊಟ್ಟ ಆನಂದ ಮುಂದೆ ನಡೆದ
ಏನು ಭಾಗ್ಯ ಸದ್ಗುರು ಸಂಗ..... ॥೧॥

ಹುಟ್ಟು ಸಾವು ಚಕ್ರಬಿಡಿಸಿ
ಕಷ್ಟ ಸುಖದ ಡೋಣಿ ನಡೆಸಿ
ಸುಖ ದುಃಖ ಒಂದೇ ಎನಿಸಿ
ಕೊಟ್ಟ ಶಾಂತಿ ಇರವ ತೋರಿಸಿ
ಏನು ಭಾಗ್ಯ ಸದ್ಗುರು ಸಂಗ..... ॥೨॥

ನಿತ್ಯ ತೃಪ್ತಿ ಊಟ ಬಡಿಸಿ
ಹೊತ್ತು ವೇಳೆ ತಾನು ಮರೆಸಿ
ಕಾಯ ಮಾಯಾ ಎಲ್ಲ ಸರಿಸಿ
ಕೊಟ್ಟ ಸತ್ಯ ಸುಖವ ಸುರಿಸಿ
ಏನು ಭಾಗ್ಯ ಸದ್ಗುರು ಸಂಗ..... ॥೩॥

ರೋಗ ರುಜಿಯ ಗುಣವ ಮಾಡಿ
ಹಸಿವು ತೃಷೆಯ ಮರೆಯ ಮಾಡಿ
ಕಾಮ ಕ್ರೋಧ ದೂರಮಾಡಿ
ಕೊಟ್ಟ ಜ್ಞಾನ ಕೃಪೆಯ ಮಾಡಿ
ಏನು ಭಾಗ್ಯ ಸದ್ಗುರು ಸಂಗ..... ॥೪॥

ಡಾ. ಶಿವ

CC-0. In Public Domain. Digitized by eGangotri

ನೀ ಕಾಯೋs ತಂದೆss
ಶರಣು ಸದ್ಗುರು ಎಂದೆ ॥ಪ॥

ಉದ್ಧಾರ ಮಾಡೋ ತಂದೆ
ಮುಕ್ತಿ ಬಯಸಿ ಬಂದೆ ॥ಅ. ಪ॥

ಜನ್ಮವೆ ಸುತ್ತುತ ಬಂದೆ
ಅಜ್ಞಾನ ಕತ್ತಲೆ ಮುಂದೆ
ದುಃಖಸಾಗರ ಹಿಂದೆ
ಅಶಾಂತಿ ಸುತ್ತು ಕಂಡೆ
ನೀ ಕಾಯೋs ತಂದೆss..... ॥೧॥

ಮಡದಿ ಮಕ್ಕಳ ಕಟ್ಟೊಂಡೆ
ಮೋಹ ಪಾಶದಿ ಬಿಕ್ಕೊಂಡೆ
ಸಂಸಾರ ಕೆಸರಾಗ ಸಿಕ್ಕೊಂಡೆ
ಹೇಸಿಗೆ ಹುಳದಿ ಬಿದ್ಕೊಂಡೆ
ನೀ ಕಾಯೋs ತಂದೆss..... ॥೨॥

ವಿವೇಕ ವೈರಾಗ್ಯ ನೀಡೆಂದೆ
ಶಮೆ ದಮೆಯ ಕೊಡೆಂದೆ
ಶ್ರದ್ಧೆ ನಿಷ್ಠೆಯ ಬೆಳೆಸೆಂದೆ
ಶಾಂತಿ ಸಮಾಧಾನ ತುಂಬೆಂದೆ
ನೀ ಕಾಯೋs ತಂದೆss..... ॥೩॥

ಸತ್ಸಂಗವಾಸ ಕೋರಿದೆ
ಬುದ್ಧಿಯ ತಿದ್ದಲು ಕೇಳಿದೆ
ಶಾಸ್ತ್ರ ಶ್ರವಣ ಬೇಡಿದೆ
ಮುಕ್ತಿ ಮೋಕ್ಷ ಬಯಸಿದೆ
ನೀ ಕಾಯೋs ತಂದೆss..... ॥೪॥

CC-O. In Public Domain. Digitized by eGangotri

ಗುರುವಿನಂಘ್ರಿಗೆ ಶಿರವು ಬಾಗಿ
ಪಾದ ಪದ್ಮಕೆ ಪಣಿಯು ತಾಗಿ
ಚರಣಕಮಲಕೆ ಕರವ ಚಾಚಿ
ಗುರು ಪದದಿ ಮುದಿಸು ಗರುವದಿ
ಎಲೆ ಜೀವಾ ಮುದಿಸು ಗರುವದಿ..... ॥೧॥

ಕರದ ಕಮಲಕೆ ಹಸ್ತವನು ನೀಡಿ
ಕೈ–ಕೈಗಳನು ಮಸ್ತಕಕೆ ಬೇಡಿ
ವರದ ಹಸ್ತಕೆ ತಲೆಯ ತೋಡಿ
ಜ್ಞಾನ ಮುದ್ರೆಗೆ ಸ್ತುತಿಸು ಹಾಡಿ
ಎಲೆ ಜೀವಾ ಸ್ತುತಿಸು ಹಾಡಿ..... ॥೨॥

ಗುರುವು ಬ್ರಹ್ಮನು ತನುವ ನೀಡು
ಗುರುವು ವಿಷ್ಣುವು ಮನವ ನೀಡು
ಗುರುವು ಮಹೇಶ್ವರ ಧನವ ನೀಡು
ಗುರುವು ಪರಬ್ರಹ್ಮ ನೀಡಿ ನೋಡು
ಎಲೆ ಜೀವಾ ನೀಡಿ ನೋಡು..... ॥೩॥

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಡೆಲೊ ಜೀವs ಬೇಡಿದs ಕೊಡುವಾ ।
ಪರಬ್ರಹ್ಮ ಸದ್ಗುರು ದೇವಾ ॥

ವಿಷಯವಾಸನಾ ಬಿಡಲೊ ಜೀವ
ಬೇಡೆಲೊ ಮುಕ್ತಿಯ ಸದ್ಗುರು ದೇವನಾ
ನರನ ಜನ್ಮದಿ ಹುಟ್ಟಿssಬಂದಿs
ಕೊನೆಯ ಜನ್ಮವ ಸದ್ಗುರು ಮಾಡುವಾ
ಬೇಡೆಲೊ ಜೀವs..... ॥೦॥

ನಾನು ನನ್ನದು ಬಡಬಡಿಕೆ ನಿನ್ನದು
ಬಿಡಲು ಹಿಡಿಯೊ ಸದ್ಗುರು ಚರಣವಾ
ಅಜ್ಞಾನ–ಸಂಸಾರ ಮೂಢ ಬುದ್ಧಿ
ಕಳೆಯುವಾ. ಪ್ರಾರ್ಥಿಸು ಸದ್ಗುರುನಾಥನಾ
ಬೇಡೆಲೊ ಜೀವs..... ॥೨॥

ಸತ್ಯs ಸುಖಿವs ಸಚ್ಚಿದಾನಂದವs
ಮುಕ್ತಿಯ ನೀಡುವ ಸದ್ಗುರು ಜ್ಞಾನವಾ
ಗುರುವೇ ಬ್ರಹ್ಮ , ಗುರುವೇ ವಿಷ್ಣು
ಗುರುವೇ ಮಹೇಶ್ವರ, ಪರಬ್ರಹ್ಮ ನಿನ್ನವಾ
ಬೇಡೆಲೊ ಜೀವs..... ॥೩॥

Sri Vidyabharathi Book Centre, Sringeri

CC-O. In Public Domain. Digitized by eGangotri

ನೀ ಬಂದೆss ಬೆಳಕನೂ ತಂದೆ ಗುರುರಾಯಾ ॥ಪ॥
ಉಲ್ಲಾಸ–ಆನಂದ, ಮನೆ–ಮನ ತುಂಬುತಾ ॥ಅ.ಪ॥

ಮೋಡದ ಮರೆಯ ಮಿಂಚಿನ ತೆರದಿ
ಕಾಡಡವಿಯ ಮಲ್ಲಿಗೆ ಅಂದದಿ
ನೀs ಬಂs ದೇssss..... ॥೧॥

ಸಾಗರ ತೀರದ ನೊರೆ ತೆರೆ ತೆರದಿ
ಆಕಾಶ ಗಂಗೆಯ ನಕ್ಷತ್ರ ಪುಂಜದಿ
ನೀs ಬಂs ದೇssss..... ॥೨॥

ಸೂರ್ಯನ ಕಿರಣದ ಬಾಣದ ತೆರದಿ
ಚಂದ್ರನ ಹುಣ್ಣಿಮೆ ಅಂದದ ಮುದದಿ
ನೀs ಬಂs ದೇssss..... ॥೩॥

ನಂದಾದೀಪದ ಜ್ಯೋತಿಯ ತೆರದಿ
ಕಪಿಲೆಯು ಕರೆದಿಹ ಅಮೃತಧಾರದಿ
ನೀs ಬಂs ದೇss ॥೪॥

ಬಾನೊಳು ಹಾರುವ ಬಾನಾಡಿ ತೆರದಿ
ಗೌರಿಶಂಕರ ಗಂಗಾ ಪ್ರಪಾತದಿ
ನೀs ಬಂ s ದೇ ss..... ॥೫॥

ಮೂಡಣ ಬೆಳ್ಳಿಯ ಚುಕ್ಕಿಯ ತೆರದಿ
ಚುಮು ಚುಮು ನಸುಕಿನ ಉಷೆಃ ಪ್ರಭಾವದಿ
ನೀs ಬಂs ದೇ ss..... ॥೬॥

★

Sri Vidyabharathi Book Centre, Sringeri

CC-0. In Public Domain. Digitized by eGangotri

ಮುಕ್ತರಾದೆವೋ ಭಕ್ತರೆಲ್ಲ
ನಿತ್ಯ ಮುಕ್ತ ನಿನ್ನ ಕಂಡು ॥ಪ॥

ನಿನ್ನ ಶ್ರವಣ ನಿತ್ಯ ಕೇಳಿ
ನಿನ್ನ ಸಂಗ ಸತ್ಯ ತಾಳಿ
ನಿನ್ನ ಸುಖವು ಚೈತ್ಯ ಹೇಳಿ
ನಿನ್ನ ಅರಿವು ಮರ್ತ್ಯ ಹೋಳಿ
ಮುಕ್ತರಾದೆವೋ ಭಕ್ತರೆಲ್ಲ..... ॥೧॥

ಭಕ್ತಿ ಭಾವ ಒಂದೇ ಮಾಡಿ
ನಿತ್ಯ ನಿರ್ಮಲ ಬಂದೇ ಕೂಡಿ
ಎತ್ತಿ ಹಿಡಿದೆ ಆಟ ಆಡಿ
ಮತ್ತೆ ಹರಸು ಶಾಂತಿ ನೀಡಿ
ಮುಕ್ತರಾದೆವೋ ಭಕ್ತರೆಲ್ಲ
ನಿತ್ಯ ಮುಕ್ತ ನಿನ್ನ ಕಂಡು..... ॥೨॥

★

Sri Vidyabharathi Book Centre, Sringeri

CC-O. In Public Domain. Digitized by eGangotri

ಸಖೀ ನೋಡೇ ಈ ಬೆಳಕೂss
ಸದ್ಗುರುನಾಥನss ಥಳಕೂss ॥ಪ॥

ಈತನೇ ಸೃಷ್ಟಿಪ ಬ್ರಹ್ಮನು ಅಂತೆ
ಈತನೇ ರಕ್ಷಿಪ ವಿಷ್ಣುವಂತೆ
ಈತನೇ ನಾಶಿಪ ಮಹೇಶ್ವರನಂತೆ
ಅಬ್ಬಬ್ಬ ಈತ ಪರಬ್ರಹ್ಮನಂತೆ ॥೧॥

ಬ್ರಹ್ಮಾಂಡ ತುಂಬಿದ ಶಕ್ತಿಯು ಅಂತೆ
ಅಜ್ಞಾನ ನಾಶದ ಸೂರ್ಯನಂತೆ
ಸ್ಥಾವರ ಜಂಗಮ ಚೇತನವಂತೆ
ಮೂಲೋಕ ಬೆಳಗುವ ಚೈತನ್ಯವಂತೆ ॥೨॥

ವೇದಾಂತ ರತ್ನ ಧರಿಸಿರುವನಂತೆ
ನಿರಂಜನ ರೂಪ ತೊಟ್ಟಿರುವನಂತೆ
ತತ್ತ್ವದ ಮಾಲೆ ಕೊರಳೊಳಗಂತೆ
ಇಹಪರ ಸುಖವ ಕೊಡುವನು ಅಂತೆ ॥೩॥

ಕರ್ಮದ ನಾಶವ ಮಾಡುವನಂತೆ
ಸಂಸಾರ ಮರ್ಮವ ತಿಳಿಸುವನಂತೆ
ಅಖಂಡ ಸೌಖ್ಯವ ಈಯುವನಂತೆ
ಜೀವಕೆ ಮುಕ್ತಿಯ ಕರುಣಿಪನಂತೆ ॥೪॥

ಗುರುವಿಗೂ ಹೆಚ್ಚಿನ ತತ್ತ್ವವಿಲ್ಲಂತೆ
ಗುರುವಿಗೂ ಹೆಚ್ಚಿನ ತಪವಿಲ್ಲಂತೆ
ಗುರುವಿಗೂ ಹೆಚ್ಚಿನ ಜ್ಞಾನವಿಲ್ಲಂತೆ
ಗುರುವಿಗೂ ಹೆಚ್ಚಿನ ಮೋಕ್ಷವಿಲ್ಲಂತೆ ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುವೇ ಜಗಕೆ ಆದಿಯು ಅಂತೆ
ಗುರುವೆ ಸೃಷ್ಟಿಗೆ ಮೂಲನು ಅಂತೆ
ಗುರುವೇ ದೇವರ ದೇವನು ಅಂತೆ
ಗುರುವೇ ಜಗದೊಳು ಶ್ರೇಷ್ಠನು ಅಂತೆ ॥೬॥

ಬ್ರಹ್ಮಾನಂದದಿ ಮುಕ್ತನು ಅಂತೆ
ಪರಮ ಸುಖದ ಪರದೈವವಂತೆ
ಈತನು ಒಬ್ಬನೇ ಇರುವವನಂತೆ
ಜ್ಞಾನದ ಮೂರ್ತಿಯು ಇವನೇ ಅಂತೆ ॥೭॥

ದ್ವಂದ್ವದ ಗೊಂದಲ ಇಲ್ಲೇ ಇಲ್ಲಂತೆ
ಆಕಾಶದಂತೆ ಒಳಹೊರಗಂತೆ
ನೀನೇ 'ಅದು' ಆಗಿರುವನಂತೆ
ಬೇರೊಂದು ಇಲ್ಲದ ಸ್ಥಿತಿಯೇ ಅಂತೆ ॥೮॥

ನಿತ್ಯದಿ ಆತ ಇರುತಿಹನಂತೆ
ನಿರ್ಮಲ ಸ್ಥಿತಿಯೇ ಅವನದು ಅಂತೆ
ಕೂಟಸ್ಥ ಬ್ರಹ್ಮನ ಅವಸ್ಥೆಯಂತೆ
ಬುದ್ಧಿಗೆ ಗೋಚರ ಆಗುವನಂತೆ ॥೯॥

ಭಾವದ ಆಚೆಗೆ ಇರುವವನಂತೆ
ಗುಣಗಳ ಬಾಧೆ ಅವಗಿಲ್ಲಂತೆ
ಎಲ್ಲಕೂ ಸಾಕ್ಷಿ ಅವನೇ ಅಂತ
ಇಂತಹ ಗುರುವೇ ಸದ್ಗುರುವಂತೆ ॥೧೦॥

ಸದ್ಗುರು ನನ್ನ ಸ್ವಾಮಿಯು ಸಖಿಯೇ
ಸದ್ಗುರು ನನ್ನ ಜಗದ್ಗುರು ಸಖಿಯೇ
ಸದ್ಗುರು ನನ್ನ ಜೀವಾತ್ಮ ಸಖಿಯೇ
ಸದ್ಗುರು ನನ್ನ ಆತ್ಮನು ಸಖಿಯೇ ॥೧೧॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಗಣಿತ ಗುಣಗಳ ಮಧ್ಯದಿ ಹೊಳೆವನು
ಅಗುಣನಾದವ ನನ್ನ ಗುರು ।।

ಆದಿ ಅಂತ್ಯದ ಆಧಾರವಿಲ್ಲದ
ಆಧಾರ ದೇವನು ನನ್ನ ಗುರು ।।

ಇತರರಾರಿಲ್ಲದೇ ಇರುವವನೊಬ್ಬನು
ಇತಿಹಾಸಕರ್ತನು ನನ್ನ ಗುರು ।।

ಈತನೇ ಜಗದಲಿ ಈಯುವ ಸುಖವನ್ನು
ಈಶ್ವರ ದೇವನು ನನ್ನ ಗುರು ।।

ಉಭಯ ಲೋಕಕು ಉದಾತ್ತ ಮೂರುತಿ
ಉದ್ಧಾರ ಮಾಡುವ ನನ್ನ ಗುರು ।।

ಊಹೆಗೂ ಮೀರಿದ ಕೀರ್ತಿ ಶಿಖರದ
ಊರ್ಜಸ್ವಿ ಅಲ್ಲವೆ ನನ್ನ ಗುರು ।।

ಋಣಾನುಬಂಧದ ಬಂಧನ ಹರಿವನು
ಋಜುವೇ ಇದಕೆ ನನ್ನ ಗುರು ।।

ಎಲ್ಲವ ಬಲ್ಲವ ಬ್ರಹ್ಮದೇವನಿವ
ಎಲ್ಲೆಡೆ ತುಂಬಿಹ ನನ್ನ ಗುರು ।।

ಏಕಾಂತ ಪ್ರೀಯ ಶ್ರೀಕಾಂತನಾಥ
ಏನೆಂತು ಹೇಳಲಿ ನನ್ನ ಗುರು ।।

CC-O. Indic Digital Library by eGangotri

ಏಕ್ಯರೂಪನು ನನ್ನ ಗುರು ।।

ಒಡೆಯನೀತನು ನಮ್ಮ ಪೊಡವಿಗೆ
ಒಂದಿಸು ಬಂಧು ನನ್ನ ಗುರು ।।

ಓತಪ್ರೋತವಿದೆ ಈತನ ಪ್ರೀತಿಯು
ಓಪಾದಿ ಇಲ್ಲದ ನನ್ನ ಗುರು ।।

ಔದಾರ್ಯ ಮೂರುತಿ ಉದಾರ ಚರಿತ
ಔಷಧ ಭವಕೆ ನನ್ನ ಗುರು ।।

ಅಂದಂತೆ ನಡೆಯುವ ಆದರ ಭಾವದ
ಅಂದ ರೂಪನು ನನ್ನ ಗುರು ॥

ಅಃ ಓಹೋಹೋs ಅಃ ಓಹೊಹೋs
ಅಃ ಓಹೊಹೋs ನನ್ನ ಗುರು ॥

★

CC-O. In Public Domain. Digitized by eGangotri

ಜ್ಞಾನಿಯು ಇವನೇ ಎನಿಸುವನಮ್ಮ
ಒಳಗಡೆ ಎಲ್ಲವ ಬಿಟ್ಟವನಮ್ಮ ॥

ಹುಡುಗರ ಕೂಡ ಹುಡುಗನು ಅಮ್ಮ
ಅವರೊಳು ಕೂಡಿ ಆಡುವನಮ್ಮ ॥

ಮುದುಕರ ಮುಂದೆ ಮುದುಕನು ಅಮ್ಮ
ಅವರಿಗೂ ಬುದ್ಧಿ ಹೇಳುವನಮ್ಮ ॥

ಯುವಕರ ಹತ್ತಿರ ಯುವಕನು ಅಮ್ಮ
ಯಮಕಿಗೆ ಇವನಲಿ ಕಡಿಮಿಲ್ಲಮ್ಮ ॥

ಧೀರರ ನಡುವೆ ಧೀರನು ಅಮ್ಮ
ಸಾವಿಗೂ ಇವನು ಹೆದರನು ಅಮ್ಮ ॥

ದುಃಖಿಗಳೊಳಗೆ ದುಃಖಿಯು ಅಮ್ಮ
ದುಃಖವ ತಡೆಯದೇ ಅಳುವನು ಅಮ್ಮ ॥

ಸುಖಿಗಳ ಸಂಗಡ ಸುಖಿಸುವನಮ್ಮ
ಸುಖಪಡುವಾಗಲೂ ಮುದಿಸನು ಅಮ್ಮ ॥

ಕರ್ಮವನೆಲ್ಲವ ಮಾಡುವ ನಮ್ಮ
ಕರ್ತನು ತಾನೆಂದು ಭಾವಿಸನಮ್ಮ ॥

ವಿನಯಕೆ ಇವನಿಗೆ ಮಣೆಬೇಕಮ್ಮ
ವಿನಯವ ಇವನೊಳು ಕಲಿಬೇಕಮ್ಮ ॥

ಮಾತನು ಮಧುರ ಆಡುವನಮ್ಮ
ಮಾತಿನ ಮೋಡಿಗೆ ಮೈ ಮರೆವುದಮ್ಮ ॥

ಸ್ನೇಹಕೆ ಇವನಿಗೆ ಸಾಟಿಲ್ಲಮ್ಮ
ಸ್ನೇಹದ ಶೆಲೆಯನೇ ಹರಿಸುವನಮ್ಮ ॥

Sri Vidyabharathi Book Centre, Sirigere

CC-0. In Public Domain. Digitized by eGangotri

ಹೆದರಿಕೆ ಅಂಜಿಕೆ ಇವಗಿಲ್ಲಮ್ಮ
ಭಯವೆಂಬುವದೇ ಗೊತ್ತಿಲ್ಲಮ್ಮ ॥

ದೀನನು ದರಿದ್ರನು ಇವನಲ್ಲಮ್ಮ
ಭಿಕ್ಷೆಯನೆಂದೂ ಯಾಚಿಸನಮ್ಮ ॥

ಗರ್ವದಿ ತಾನು ಮೆರೆಯನು ಅಮ್ಮ
ದುರಭಿಮಾನವು ಇಲ್ಲೇ ಇಲ್ಲಮ್ಮ ॥

ಸೋತವ ಖಿನ್ನನು ಇವನಲ್ಲಮ್ಮ
ಹತಾಶನಾಗಿ ಕೂಡ್ರನು ಅಮ್ಮ ॥

ನಗುತಲಿ ಇರಲು ಹೇಳುವನಮ್ಮ
ಪ್ರಸನ್ನ ಮುಖಿಯು ಇವನೋಡಮ್ಮ ॥

ಚಂಚಲ ಮನದವ ಇವನಲ್ಲಮ್ಮ
ಚಿಂತೆಯನೆಂದೂ ಮಾಡನು ಅಮ್ಮ ॥

ಹೆಚ್ಚು ಕಡಿಮೆ ಇವಗಿಲ್ಲಮ್ಮ
ಹೆಚ್ಚು ಕಡಿಮೆ ಆಗನು ಅಮ್ಮ ॥

ಒಳ್ಳೆಯ ಕೆಟ್ಟದು ಕಾಣನು ಅಮ್ಮ
ಕೆಲಸಗಳೆಲ್ಲವು ಸಮನೋಡಮ್ಮ ॥

ಸುಖವನು ಇವನು ಪಡುವನು ಅಮ್ಮ
ದಾಸನು ಅದಕೆ ಅಲ್ಲ ನೋಡಮ್ಮ ॥

ಬೇಕೆಂದು ಹಂಬಲ ಪಡದವನಮ್ಮ
ಬಂದರೆ ಬೇಡೆಂದು ಜರಿಯನು ಅಮ್ಮ ॥

ಎಲ್ಲವ ಕಟ್ಟಿsಕೊಂಡವನಮ್ಮ
ಎಲ್ಲವ ಬಿಟ್ಟುsಬಿಟ್ಟವನಮ್ಮ ॥

ಹೊರಗಡೆ ಕೆಲಸವ ಮಾಡುವನಮ್ಮ
ಒಳಗಡೆ ಸ್ಥಿರದಲಿ ಇರುವವನಮ್ಮ ॥

CC-O. In Public Domain. Digitized by eGangotri

ಮಾಡುವ ಕೆಲಸವು ಪರಿಪೂರ್ಣವಮ್ಮ
ಕೆಲಸದ ಘನತೆಗೆ ಕುಂದಿಲ್ಲವಮ್ಮ ॥

ಹುಚ್ಚನೂ ಭ್ರಾಂತನೂ ಇವನಲ್ಲವಮ್ಮ
ಧೈರ್ಯಕೆ ಇವನಲಿ ಕೊರತಿಲ್ಲಪ್ಪ ॥

ಸಂಸಾರದೊಳಗೆ ಇರುವವನಮ್ಮ
ಇವನೊಳು ಸಂಸಾರ ಇಲ್ಲನೋಡಮ್ಮ ॥

ಸಂಸಾರ ಜಿಡ್ಡು ಹತ್ತದಂತಮ್ಮ
ವೇದಾಂತ ಎಣ್ಣೆ ಸವರಿಕೊಂಡಾನಮ್ಮ ॥

ಕೆಸರಲಿ ಕಮಲ ಇರುವಂತಮ್ಮ
ಕಮಲಕೆ ಕೆಸರು ಹತ್ತಿಕೊಂಡಿಲ್ಲಮ್ಮ ॥

ನೀರಲಿ ಡೋಣಿ ತೇಲುವಂತಮ್ಮ
ಡೋಣಿಯಲಿ ನೀರು ತುಂಬಿಕೊಂಡಿಲ್ಲಮ್ಮ ॥

ಜೀವದ ಧ್ಯೇಯವ ಅರಿತವನಮ್ಮ
ಜೀವನ ಮುಕ್ತಿಯ ಪಡೆದವನಮ್ಮ ॥

★

CC-O. In Public Domain. Digitized by eGangotri

ಗುರುಮಹಾರಾಜ ಗುರು ಜೈ ಜೈ
ಪರಬ್ರಹ್ಮ ಸದ್ಗುರು !
ತಾಯಿಯ ತಾಯಿ ಗುರುಮಹಾರಾಜ
ತಂದಿಯ ತಂದಿ ಗುರುಮಹಾರಾಜ
ಬಂಧು ಬಾಂಧವ ಗುರುಮಹಾರಾಜ
ಪ್ರಪಂಚ ಬಳಗ ಗುರುಮಹಾರಾಜ ॥೧॥

ಪರಿವಾರ ಜನವೂ ಗುರುಮಹಾರಾಜ
ಸಂಸಾರ ಸಂಗತಿ ಗುರುಮಹಾರಾಜ
ಸ್ನೇಹಿತ ಹಿತೈಷಿ ಗುರುಮಹಾರಾಜ
ಸಾರಾ ಸಾರವೂ ಗುರುಮಹಾರಾಜ ॥೨॥

ದೈವದ ದೈವ ಗುರುಮಹಾರಾಜ
ಪರದೈವ ನೀನೇ ಗುರುಮಹಾರಾಜ
ಬ್ರಹ್ಮನ ಬ್ರಹ್ಮ ಗುರುಮಹಾರಾಜ
ಪರಬ್ರಹ್ಮ ನೀನೇ ಗುರುಮಹಾರಾಜ

ಜ್ಞಾನದ ಜ್ಞಾನ ಗುರುಮಹಾರಾಜ
ಮೋಕ್ಷದ ಮೋಕ್ಷ ಗುರುಮಹಾರಾಜ
ಸುಖದ ಸೌಖ್ಯ ಗುರುಮಹಾರಾಜ
ಶಾಂತಿಯ ಶಾಂತಿ ಗುರುಮಹಾರಾಜ ॥೪॥

ಜೀವದ ಜೀವ ಗುರುಮಹಾರಾಜ
ಪ್ರಾಣದ ಪ್ರಾಣ ಗುರುಮಹಾರಾಜ
ಆತ್ಮನ ಆತ್ಮ ಗುರುಮಹಾರಾಜ
ಪರಮ ಆತ್ಮ ಗುರುಮಹಾರಾಜ ॥೫॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಕಾರ ನೀನೇ ಗುರುಮಹಾರಾಜ
ಓಂಕಾರ ನೀನೇ ಗುರುಮಹಾರಾಜ
ಸಾಕಾರ ನೀನೇ ಗುರುಮಹಾರಾಜ
ನಿರಾಕಾರ ನೀನೇ ಗುರುಮಹಾರಾಜ ॥೬॥

ಪರಶು ಸ್ಪರ್ಶವು ಗುರುಮಹಾರಾಜ
ಶಕ್ತಿ ಸಾಮರ್ಥ್ಯ ಗುರುಮಹಾರಾಜ
ಅಮೃತ ಅಮರ ಗುರುಮಹಾರಾಜ
ಮುಕ್ತಿಯು ಮುಕ್ತಿ ಗುರುಮಹಾರಾಜ ॥೭॥

ಜ್ಞಾನ ಸ್ವರೂಪ ಗುರುಮಹಾರಾಜ
ಜ್ಞಾನ ಜ್ಯೋತಿ ಗುರುಮಹಾರಾಜ
ಜ್ಞಾನಾನಂದಾ ಗುರುಮಹಾರಾಜ
ಜ್ಞಾನಮೂರ್ತಿಯೇ ಗುರುಮಹಾರಾಜ ॥೮॥

ಅಧ್ಯಾತ್ಮ ಜ್ಞಾನ ಗುರುಮಹಾರಾಜ
ವೇದಾಂತ ವಿದ್ಯೆ ಗುರುಮಹಾರಾಜ
ಶ್ರೀಗುರು ಓಂ ಗುರು ಗುರುಮಹಾರಾಜ
ಸದ್ಗುರು ಜಗದ್ಗುರು ಗುರುಮಹಾರಾಜ ॥೯॥

ಗುರು ಮಹಾರಾಜ ಗುರು ಜೈ ಜೈ
ಪರಬ್ರಹ್ಮ ಸದ್ಗುರು

★

Sri Vidyabharathi Book Centre, Sringeri

 CC-0. In Public Domain. Digitized by eGangotri

ಆರತಿ ಶಂಕರಾಚಾರ್ಯ
ನಿತ್ಯ ನಿರಂಜನ ಸೂರ್ಯ
ಅದ್ವಯ ಜ್ಞಾನದ ಪ್ರಾಚಾರ್ಯ
ಆರತಿ ಯತಿ ವರ್ಯ ॥೧॥

ಸಚ್ಚಿದಾನಂದ ಗುರುಮೂರ್ತಿ
ಹೊತ್ತಿಸಿ ಜ್ಞಾನದಾ ಜ್ಯೋತಿ
ಬೆಳಗುವೆ ಅಜ್ಞಾನ ಮತಿ
ಜಗವನು ಉದ್ಧರಿಸಿ ॥೨॥

ಶಿವಗುರು ತಂದೆಯಾಗಿರುವ
ಆರ್ಯಾಂಬೆ ಗರ್ಭದೊಳು
ವೈಶಾಖ ಶುದ್ಧ ಪಂಚಮಯು
ಪಾವನ ಈ ಧರೆಯು ॥೩॥

ವರಪ್ರಸಾದ ಶಿವನಿಂದ
ಹುಟ್ಟಿದ ಶಂಕರ ಅಂದ
ರೂಪ ಆಟ ಬಲು ಚೆಂದ
ನೋಡುವ ಜನಕಾನಂದ ॥೪॥

ಐದು ವರ್ಷದಾ ವಟುವು
ಬ್ರಹ್ಮಜ್ಞಾನದಾ ಹಸಿವು
ಬೇಡಿತು ತಾಯಿಯ ವರವು
ಸನ್ಯಾಸಿಯೆ ಇರುವು ॥೫॥

CC-O. In Public Domain. Digitized by eGangotri

ಬಾಲಕನಗಾದ್ಯ ಸಿದ್ಧಿಗೆ
ಬಂದಳು ಪೂರ್ಣೆ ಬಾಗಿಲಿಗೆ
ಕಾಲನು ಹಿಡಿದಾ ಮೊಸಳೆಗೆ
ದೊರೆಯಿತು ತಾ ಒಪ್ಪಿಗೆ ॥೬॥

ನರ್ಮದಾನದಿ ತೀರ
ಗೋವಿಂದಾ ಯತಿವರ
ನಡೆದು ಬಂದನೀ ಕುವರ
ಶಿಷ್ಯನಾದನವ ಶಂಕರ ॥೭॥

ಬುದ್ಧಿಯ ಆಗಾಧ ಸಿದ್ಧಿಗೆ
ಗುರುವಿನ ಕೃಪೆಯು ಶಿಷ್ಯನಿಗೆ
ಎಂಟು ವರ್ಷದ ಬಾಲನಿಗೆ
ಉಪನಿಷತ್ ವೇದ ಬಾಯೊಳಗೆ ॥೮॥

ವೃದ್ಧ ಶಿಷ್ಯರು ಶಂಕರಗೆ
ಪ್ರವಚನ ಭಾಷ್ಯ ಅವರಿಗೆ
ಸಾಗಿದ ಶಂಕರ ಬದರಿಗೆ
ಏಕಾಂತದ ಇರವಿಗೆ ॥೯॥

ಹನ್ನೊಂದು ವರ್ಷದಾ ಯತಿ
ಹದಿನಾರು ಭಾಷ್ಯಗಳು
ಬರೆದು ಹೇಳಿದಾ ಶಿಷ್ಯರಿಗೆ
'ಅಹಂ ಬ್ರಹ್ಮ'ದಾ ಅರಿವಿಗೆ ॥೧೦॥

ಕುಮಾರಿಲ ಭಟ್ಟ ಕರ್ಮಠನು
ಆತ್ಮಜ್ಞಾನ ಇರದವನು
ಮಂಡನ ಮಿಶ್ರ ಶಿಷ್ಯನು
ವಾದದಿ ಸೋತ ಈತನು ॥೧೧॥

CC-0. In Public Domain. Digitized by eGangotri

ಶೃಂಗೇರಿ ದಕ್ಷಿಣಕೆ
ಗೋಽವರ್ಧನ ಪುರಿ ಪೂರ್ವಕ್ಕೆ
ಬದರೀ ಪೀಽಠ ಉತ್ತರಕೆ
ಕೃಷ್ಣನ ದ್ವಾರಕೆ ಪಶ್ಚಿಮಕೆ ॥೧೨॥

ಪೂಽರ್ವ ಪಶ್ಚಿಮ ದ್ವೀಪಕ್ಕೆ
ಉತ್ತರ ದಕ್ಷಿಣ ಭಾರತಕೆ
ಪದ್ಮಪಾಽದ ಹಸ್ತಾಮಲಕ
ತ್ರೋಟಕ ಸುರೇಶ ಪೀಠಕ್ಕೆ ॥೧೩॥

'ಅಹಂಬ್ರಹ್ಮ'ವಾ ಅರುಹೀದಾ
'ಅಯಮಾತ್ಮ ಬ್ರಹ್ಮ' ತಿಳಿಸೀಬ್ದಾ
'ಪ್ರಜ್ಞಾನ ಬ್ರಹ್ಮ'ದಿ ಉಳಿಸೀದಾ
'ತತ್ತ್ವಮಸಿ'ಯನು ಬೋಧಿಸಿದಾ ॥೧೪॥

ವೈದಿಕ ಧಽರ್ಮ ಉದ್ಧಾರಿ
ತತ್ತ್ವಜ್ಞಾನ ಓಂಕಾರಿ
ಜಗದ್ಗುರು ಶ್ರೀಽಶಂಕರ
ವಂದನೆ ಶಿವನ ಅವತಾರಿ ॥೧೫॥

CC-O. In Public Domain. Digitized by eGangotri

ಮಾರಾಟಕ್ಕೆ ಸಿದ್ಧವಿರುವ
ಡಾ. ಶಿವ ಅವರ ಗ್ರಂಥಗಳು

1	CANCER Homoeopathy Challenges (A to Z Available)	35–00
2	ಹೋಮಿಯೋಪಥಿ (ಕನ್ನಡ ಪಠ್ಯಪುಸ್ತಕ)	25–00
3	ಶಿವೋಪನಿಷತ್–ಮಂತ್ರ ಸಂಗ್ರಹ (ಕನ್ನಡ–ಇಂಗ್ಲೀಷ ಭಾಷಾಂತರ ಹಾಗೂ ಆರ್ಥ)	10–00
4	ಕಣ್ಣು ಸಾವಿರದ ಕಣ್ಣು (ಕಾವ್ಯ ಗುಚ್ಚ)	5–00
5	ಸದ್ಗುರು ಸ್ತವನ	5–00
6	ಸತ್ಯವಾದಿ ಸಾಕ್ರೆಟೀಸ್ ಮತ್ತು ಸ್ವಾಮಿ ಆನಂದ (ಎರಡು ಅಧ್ಯಾತ್ಮಿಕ ಏಕಾಂಕಗಳು)	3–00
7	ದರ್ಶನಾಗೇದ ಮುಕ್ತನಾಗಿಲ್ಲ (ಬೆಂಪ್ರೆ ವ್ಯಕ್ತಿಚಿತ್ರ)	3–00

ಪುಸ್ತಕಗಳು ದೊರೆಯುವ ಸ್ಥಳ :

ಹೋಮಿಯೊ ಹೌಸ್ ಬ್ರಾಡ್ವೆ
ಹುಬ್ಬಳ್ಳಿ

Sri Vidyabharathi Book Centre, Sringeri

ಡಾ. C. ವಿ. ಆನಂದ ಪ್ರಕಾಶನ ಪ್ರಕಟಿಸಿರುವ ಕೃತಿಗಳು

1 ಒಂದು ಬಿಂದು (ಕವನ ಸಂಗ್ರಹ)

2 ಆಂತರಂಗ ಗೀತ "

3 ಚೈತ್ರೋದಯ "

4 ಸ್ವಾಮಿ ಆನಂದ ಮತ್ತು ಇತರ ಕಥೆಗಳು

5 ಬಾಳ ಬೆಳೆ (ವೈಚಾರಿಕ ಗ್ರಂಥ)

6 ಮಾತು ಮತ್ತು ಮುತ್ತು (ಮುಕ್ತನುಡಿಗಳು)

7 ನಿವೃತ್ತಿ ಮಾರ್ಗ (ಆಧ್ಯಾತ್ಮಿಕ ಪ್ರಬಂಧಗಳು)

8 ಬಿಡಿಗಾಳು (ಚುಟುಕುಗಳು)

9 ವಿದೇಹಿ ಜನಕ (ಮೂರಂಕಿನ ನಾಟಕ)

10 ಬಾ ಮಾತಾಡೋಣ (ಹರಟೆ)

11 ಗುರುದೇವ (ಪದ್ಯಗಳು)

12 ಪತ್ರ–ಭಾರ್ಗವ ಸಂಪಾದ (ಭಾಷಾಂತರ)

13 ಗೀತಾಸಾರ

14 ತತ್ತ್ವಬೋಧ (ಭಾಷಾಂತರ)

15 ಮುಮುಕ್ಷುತ್ವದ ಮಹಾಮಂತ್ರಗಳು (ಸಂಗ್ರಹ)

16 Adhyatma Through Art— Bharatiya Tatwajnan Darshana (Brahmasootra, Upanishad, Bhagavadgeeta)

ಸಂಸ್ಕೃತ–ಕನ್ನಡ–ಇಂಗ್ಲೀಷ ಭಾಷಾಂತರ ಸಹಿತ.

ಪ್ರಕಾಶಕರು :

ಆನಂದ ಪ್ರಕಾಶನ, ಬ್ರಾಡ್ವೆ, ಹುಬ್ಬಳ್ಳಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸದ್ಗುರು ಸ್ತವನ

(ಗುರುಭಕ್ತಿ-ಗೀತೆಗಳು)



Sri Vidyabharathi Book Centre, Sringeri